# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.

ಸಂ:ಬಿಬಿಎಂಪಿ/ಸಕಾಅ/ಹೂಉವಿ/ 49 /2022-23 ದಿನಾಂಕ:09.06.2022

**-:ದಿನಾಂಕ:09.06.2022 ರಂದು ನಡೆದ 54-ಹೂಡಿ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-**

ಮಾನ್ಯ ಆಯುಕ್ತರವರ ಆದೇಶದ ದಿನಾಂಕ:21-09-2020ರ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ:09.06.2022 ರ ಗುರುವಾರ ಬೆಳಗ್ಗೆ 11.00 ಕ್ಕೆ ವಾರ್ಡ್ ನಂ.54-ಹೂಡಿ ವಾರ್ಡ್ ಮಟ್ಟದ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಗಳೂ ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸ್ಥಳೀಯ ಸಂಘ ಸಂಸ್ಥೆಯವರಿಗೆ ಸ್ವಾಗತ ಕೋರಿದ್ದು, ಸಭೆಯನ್ನು ಪ್ರಾರಂಭಿಸಿದರು.

**ಸಭೆಗೆ ಹಾಜರಿದ್ದವರು:-**

| ಕ್ರ.ಸಂ | ಹಾಜರಿದ್ದವರ ಹೆಸರು | ಪದನಾಮ ಅಥವಾ ಇಲಾಖೆ | ಹಾಜರಾತಿ |
|---|---|---|---|
| 1. | ಶ್ರೀ.ಕುಬೇರಪ್ಪ. ಕೆ | ಅಧ್ಯಕ್ಷರು ವಾರ್ಡ್ ನೋಡಲ್ ಅಧಿಕಾರಿಗಳು ಹಾಗೂ ಸ.ಕಾ.ಅ. ಹೂಡಿ ಉಪವಿಭಾಗ | ಹಾಜರಿದ್ದರು. |
| 2. | ಶ್ರೀ.ಶೇಖ್ ಮೊಹಿದ್ದೀನ್ | ಕಾರ್ಯದರ್ಶಿಗಳು ವಾರ್ಡ್ ಎ.ಇ. ವಾರ್ಡ್.ನಂ-54 | ಹಾಜರಿದ್ದರು. |
| 3 | ಶ್ರೀ.ನಾಗರಾಜ.ವಿ | ಹಿರಿಯ ಆರೋಗ್ಯ ಪರಿವೀಕ್ಷಕರು, | ಹಾಜರಿದ್ದರು. |
| 4 | ಶ್ರೀ.ಚಂದ್ರಪ್ಪ | ಕಿರಿಯ ಆರೋಗ್ಯ ನೀರಿಕ್ಷಕರು ಭೈರತಿ ಹೂಡಿ-54 | ಹಾಜರಿದ್ದರು. |
| 5 | ಶ್ರೀ.ಲೋಕೇಶ್‌ರೆಡ್ಡಿ | ಸಾದರಮಂಗಲ | ಹಾಜರಿದ್ದರು. |
| 6 | ಶ್ರೀ.ರಾಜೇಶ್ | ಹೂಡಿ | ಹಾಜರಿದ್ದರು. |
| 7 | ಶ್ರೀ.ಮಹೇಂದ್ರ ಪ್ರಸಾದ್ | ಕೊಡಿಗೇಹಳ್ಳಿ | ಹಾಜರಿದ್ದರು. |
| 8 | ಶ್ರೀ.ಮಾದೇಶ್ ಎಸ್.ಕೆ | | ಹಾಜರಿದ್ದರು. |
| 9 | ಶ್ರೀಮತಿ.ನರಸಮ್ಮ (ನಳಿನಿ) | SWM Sup. | ಹಾಜರಿದ್ದರು. |
| 10 | ಚೈತ್ರ ವೆಂಕಟೇಶ್ | ಎಇ. ಬಿ. ಡಬ್ಲ್ಯೂ.ಎಸ್.ಎಸ್.ಬಿ | ಹಾಜರಿದ್ದರು. |
| 11 | ಮೋಹನ್ | | ಹಾಜರಿದ್ದರು. |
| 12 | ಜೀತೇಂದ್ರ | ಮಾರ್ಶಲ್ | ಹಾಜರಿದ್ದರು. |
| 13 | ಶ್ರೀ.ಶಿವರಾಜ್.ಡಿ.ಬಿ | ಬೀದಿದೀಪಗಳು ನಿರ್ವಹಣೆ | ಹಾಜರಿದ್ದರು. |
| 14 | ವಿರೂಪಾಕ್ಷಪ್ಪ.ಎಚ್.ಎಂ | ಡಿ.ಡಬ್ಲ್ಯೂ.ಸಿ.ಸಿ | ಹಾಜರಿದ್ದರು. |
| 15 | ಪ್ರಾರ್ಥಿಬನ್.ಪಿ | ಸಾರ್ವಜನಿಕರು | ಹಾಜರಿದ್ದರು. |
| 16 | ವೀರಕೇಶನ್ | ಸಾರ್ವಜನಿಕರು | ಹಾಜರಿದ್ದರು. |
| 17 | ಜನಾರ್ಧನ್.ಸಿ | ಸಾರ್ವಜನಿಕರು | ಹಾಜರಿದ್ದರು. |
| 18 | ಸುರೇಶ್.ವಿ.ಆರ್ | ಸಾರ್ವಜನಿಕರು | ಹಾಜರಿದ್ದರು. |
| 19 | ಶರನ್‌ಕುಮಾರ್.ಬಿ | ಸಾರ್ವಜನಿಕರು | ಹಾಜರಿದ್ದರು. |
| 20 | ಆಕಾಶ್. | ಎಇ (ಮೇಜರ್‌ರೋಡ್) | ಹಾಜರಿದ್ದರು. |
| 21 | ಮೌನೇಶ ಪಾಟರ್ | ಸಾರ್ವಜನಿಕರು | ಹಾಜರಿದ್ದರು. |
| 22 | ಕನಕರಾವ್ | ಸಾರ್ವಜನಿಕರು | ಹಾಜರಿದ್ದರು. |

Scanned with CamScanner

**ಸಭೆಯ ನಡುವಳಿಗಳು:-**

- ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ನಂ-54 ರವರು ಸಭೆಗೆ ಬಂದಿರುವ ವಾರ್ಡ್ ಸದಸ್ಯರಿಗೆ, ಅಧಿಕಾರಿ/ನೌಕರರುಗಳಿಗೆ ಸ್ವಾಗತಾ ಕೋರಿಸಭೆ ನಡೆಸಿಕೊಡುವಂತೆ ಕೊರಿದರು.
- ಅಧ್ಯಕ್ಷರು ಈ ಹಿಂದೆ ನಡೆದ ವಾರ್ಡ್ ಸಮಿತಿ ಸಭೆಯಲ್ಲಿ ತಿರ್ಮಾನಗಳನ್ನು ಕೈಗೊಂಡಿರುವ ಬಗ್ಗೆ ಅಧಿಕಾರಿ/ನೌಕರರು ಚರ್ಚಿಸಲಾಯಿತ್ತು ಹಾಗೂ ಕ್ರಮವಹಿಸಲು ಸೂಚಿಸಲಾಯಿತ್ತು.
- ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು ಹಾಗೂ ಮುಂದಿನ ಸಭೆಯಲ್ಲಿ ಗೈರುಹಾಜರಾದಲ್ಲಿ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದು ಎಂದು ತಿಳಿಸಿದರು.

**I.ಘನತ್ಯಾಜ್ಯ ನಿರ್ವಹಣೆಯ ಬಗ್ಗೆ:-**

1) ಕನಕರಾವ್ ಕೋಕೋನೇಟ್ ಗಾರ್ಡನ್ ರವರು ತಮ್ಮ ಲೇಔಟ್‌ಗೆ ಕಸದ ಆಟೋ ವಾರಕ್ಕೆ ಒಮ್ಮೆ ಬರುತ್ತದೆ ಎಂದು ತಿಳಿಸಿದರು.
2) ವೀರುಪಾಕ್ಷಪ್ಪ ಕೋಕೋನೇಟ್ ಗಾರ್ಡನ್ ರವರು ಚರಂಡಿಯಿಂದ ಎತ್ತಿಹಾಕಿದ ಕಸವನ್ನು ತೆರವುಗೊಳಿಸಲು ಕೊರಿದರು.
3) ಅಧ್ಯಕ್ಷರು ಈ ವಿಚಾರವಾಗಿ ವಾರಕ್ಕೆ ಮೂರು ಬಾರಿ ತಪ್ಪದೇ ಘನತ್ಯಾಜ್ಯ ಸಂಗ್ರಹಿಸಲು ಮತ್ತು ಕಸವನ್ನು ತೆರವುಗೊಳಿಸಲು ತಿಳಿಸಿದರು.

**ಕ್ರಂ.ಸಂ 1 ಮತ್ತು 3ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಎಸ್.ಡಬ್ಲ್ಯೂ.ಎಂ/ಹಿ.ಆ.ಪ/ಕಿ.ಆ.ಪ)**

**ಬೀದಿ ದೀಪ ಹಾಗೂ ಬೆಸ್ಕಾಂ**

1) ಮಾದೇಶ್ ಸಾದರಮಂಗಲ ರವರು ಯಲ್ಲಮ್ಮ ದೇವಸ್ಥಾನದ ಪಕ್ಕ ಎಲೆಕ್ಟ್ರೀಕ್ ಪೋಲ್ ಇದ್ದು ಇದನ್ನು ತೆರವುಗೊಳಿಸಲು ಕೊರಿದರು ಹಾಗೂ ಇದನ್ನು Writing ನಲ್ಲಿ ನೀಡಿದ್ದಾರೆ.
2) ವೀರುಪಾಕ್ಷಪ್ಪ ಕೋಕೊನೇಟ್ ಗಾರ್ಡನ್‌ನಲ್ಲಿ ಹಲವು ಎಲೆಕ್ಟ್ರೀಕ್ ಕಂಬಗಳು ರಸ್ತೆಯಲ್ಲಿದ್ದು ಇವುಗಳನ್ನು ತೆರವುಗೊಳಿಸಲು ಕೊರಿದರು.
3) ವಿರುಪಾಕ್ಷಪ್ಪ ಕೋಕೊನೇಟ್ ಗಾರ್ಡನ್‌ನಲ್ಲಿ ಹೊಸ ಎಲೆಕ್ಟ್ರೀಕ್ ಲೈನ್ ಹಾಕಿಕೊಡಲು ಕೊರಿದರು.
4) ಮೊಹನ್ ಕೋಕೊನೇಟ್ ಗಾರ್ಡನ್ ರವರು ಸ್ಟ್ರೀಟ್ ಲೈಟ್ ಕಂಬಗಳಲ್ಲಿ ರಿಪೇರಿ ಮಾಡುವ ಸಂದರ್ಭದಲ್ಲಿ ಕೇಬಲ್ ಚೆಂಜ್ ಮಾಡಲು ಮತ್ತು ಹೊಸ ಬೀದಿ ದೀಪಗಳನ್ನು ಅಳವಡಿಸಲು ಕೊರಿರುತ್ತಾರೆ.
5) ಅಧ್ಯಕ್ಷರು ವಾರ್ಡ್ ಮರು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು ಇಇ ಎಲೆಕ್ಟ್ರೀಕಲ್ ರವರ ಬಳಿ ಮಾತನಾಡಿ ನಿಮಗೆ ಕೊಡಿಸುವುದಾಗಿ ತಿಳಿಸಿದರು.

**ಕ್ರಂ.ಸಂ 1ರಿಂದ 5 ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೋಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಸ ಕಾ ಅ /ಸ ಅ/ಬೆಸ್ಕಾಂ)**

Scanned with CamScanner

ಬಿ.ಡಬ್ಲ್ಯೂ.ಎಸ್,ಎಸ್.ಬಿ(BWSSB):-

1) ಪ್ರಸಾದ್ ಕೊಡಿಗೇಹಳ್ಳಿ ರವರು ಕೊಡಿಗೇಹಳ್ಳಿಯಿಂದ ಸೊಣ್ಣೇನಹಳ್ಳಿ ಮುಖ್ಯರಸ್ತೆ ಅಕ್ಕಪಕ್ಕದ ಲೇಔಟ್, ಲಕ್ಷ್ಮೀಪತಿ ವಾಟರ್ ಪ್ಲಾಂಟ್ ಏರಿಯಾದಲ್ಲಿ ಯುಜಿಡಿ ಇರುವುದಿಲ್ಲ ಎಂದು ತಿಳಿಸಿದರು.
2) ಪ್ರಸಾದ್ ಕೊಡಿಗೇಹಳ್ಳಿ ರವರು ಅಯ್ಯಪ್ಪನಗರ ಆರ್ಚ್‌ಯಿಂದ ಕೊಡಿಗೇಹಳ್ಳಿ ವರೆಗೆ ಛೇಂಬರ್‌ಗಳು ಓವರ್‌ಫ್ಲೋ ಆಗುತ್ತಿದಲ್ಲಿ ಮಳೆಗಾಲದಲ್ಲಿ ಮಾಡದೆ ಮುಂದಿನ ದಿನಗಳಲ್ಲಿ ಸರಿ ಪಡಿಸಲು ಕೋರಿದರು.
3) ವಿರುಪಾಕ್ಷಪ್ಪ ಕೋಕೋನೇಟ್ ಗಾರ್ಡನ್ ರವರು ಕೋಕೋನೇಟ್ ಗಾರ್ಡನ್‌ನಲ್ಲಿ ಹಾಕಿರುವ ಲೈನ್‌ಗಳು ಚಿಕ್ಕದಾಗಿದ್ದು ಈಗ ಹೆಚ್ಚು ಹೆಚ್ಚು ಮನೆಗಳು ಬಂದಿರುವುದರಿಂದ ಇದನ್ನು ಬದಲಿಸಿ ದೊಡ್ಡ ಲೈನ್‌ಗಳನ್ನು ಹಾಕಲು ಕೋರಿದರು.
4) ಚಂದ್ರಪ್ಪ. ಕೆ.ಆ.ಪ ರವರು ಚಂದ್ರಲೇಔಟ್ ಹಾಗೂ ಗ್ರೀನ್‌ವುಡ್ ಲೇಔಟ್‌ನಲ್ಲಿ ಛೇಂಬರ್‌ಗಳು ತುಂಬಿ ಹರಿಯುತ್ತಿದ್ದು ಎಂದು ತಿಳಿಸಿದರು.

**ಕ್ರಂ.ಸಂ 1ರಿಂದ 4 ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಸ.ಕಾ.ಅ./ಸ.ಅ/ಬಿ.ಡಬ್ಲ್ಯೂ.ಎಸ್,ಎಸ್.ಬಿ).**

**ಮೇಜರ್ ರೋಡ್**

1) ಮಾದೇಶ್ ಸಾದರಮಂಗಲ ರಸ್ತೆ ಅಗಲಿಕರಣ ಕಾಮಗಾರಿ ನಡೆಯುತ್ತಿದ್ದು ಗುತ್ತಿಗೆದಾರರು ವ್ಯವಸ್ಥಿತವಾಗಿ ಮಾಡಿರುವುದಿಲ್ಲ ಅಂದರೆ 40 ಅಡಿ, ಕೆಲವುಕಡೆ 35 ಅಡಿ, ಕೆಲವು ಕಡೆ 30 ಅಡಿ ಈರೀತಿ ಕಾಮಗಾರಿ ಮಾಡಿರುತ್ತಾರೆ ಇದನ್ನು ಸರಿಪಡಿಸಲು ಕೋರಿದರು.
2) ಪ್ರಸಾದ್ ರವರು ಕೊಡಿಗೇಹಳ್ಳಿ ಮುಖ್ಯರಸ್ತೆಯ ಅಗಲೀಕರಣದ ಬಗ್ಗೆ ಕೋರಿದರು.
3) ಅಧ್ಯಕ್ಷರು ಮುನಿಯಪ್ಪ ಎಇಇ ಮೇಜರ್ ರೋಡ್ ರವರೊಂದಿಗೆ ಚರ್ಚಿಸಿ ಮುಂದಿನ ಸಭೆಯಲ್ಲಿ ತಿಳಿಸುವುದಾಗಿ ತಿಳಿಸಿದರು.
4) ಪ್ರಸಾದ್ ಕೊಡಿಗೇಹಳ್ಳಿ ರವರು ಕೋಕೋನೇಟ್ ಗಾರ್ಡನ್‌ಗೆ ನೀರು ಕಡಿಮೆ ಬರುತ್ತಿರುತ್ತದೆ ಇದನ್ನು ಸರಿಪಡಿಸಲು ಎಇ ರವರಿಗೆ ಕೋರಿದರು.
5) ಮೋಹನ್ ಕೋಕೋನೇಟ್ ಗಾರ್ಡನ್ ರವರು ಫುಟ್‌ಪಾತ್ ಮೇಲೆ ಓಡಾಡಲು ತೊಂದರೆಯಾಗುತ್ತದೆ ಎಂದು ತಿಳಿಸಿದರು.

**ಕ್ರಂ.ಸಂ 1ರಿಂದ 5 ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಸಕಾಅ/ಸಅ/ಬಿಬಿಎಂಪಿ/ಮೇಜರ್ ರೋಡ್)**

Scanned with CamScanner

ಪೋಲೀಸ್ ಇಲಾಖೆ

1) ವಿರುಪಾಕ್ಷಪ್ಪ ಕೋಕೋನೆಟ್ ಗಾರ್ಡನ್ ನಿಂದ ತಮ್ಮ ಲೇಔಟ್ ವ್ಯಾಪ್ತಿಯ ಮುಖ್ಯ ರಸ್ತೆಯನ್ನು ಹೊಂದಿಕೊಂಡ ಕ್ರಾಸ್ ರಸ್ತೆಗಳಲ್ಲಿ ಸುಮಾರು ವಾಹನ ಸವಾರರು ವಾಹನಗಳನ್ನು ಪಾರ್ಕಿಂಗ್ ಮಾಡಿ ತೊಂದರೆ ಮಾಡುತ್ತಿರುತ್ತಾರೆ ಎಂದು ತಿಳಿಸಿದರು.
2) ಅಧ್ಯಕ್ಷರು ನೋ ಪಾರ್ಕಿಂಗ್ ಬೋಡ್ ಅಳವಡಿಸಲು ಕೋರಿ ಮಾದೇಶ್ ರವರು ಸಾದರಮಂಗಳದಲ್ಲಿ ನಾಲ್ಕು ಕಡೆ ಸಿಸಿ ಕ್ಯಾಮರಾ ಅಳವಡಿಸಲು ಕೋರಿದರು.
3) ವಿರೂಪಾಕ್ಷಪ್ಪ ರವರು ಕೋಕೋನೇಟ್ ಗಾರ್ಡನ್‌ಗೆ ಹಲವಾರು ಕಳ್ಳತನಗಳು ಹೆಚ್ಚಾಗಿದ್ದು ಪೋಲಿಸ್ ಬೀಟ್ ವ್ಯವಸ್ಥೆ ಹೆಚ್ಚು ಮಾಡಲು ಕೋರಿದರು.

**ಕ್ರಂ.ಸಂ 1 ರಿಂದ 3ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತು.**
**(ಕ್ರಮ:- ಟ್ರಾಫಿಕ್/ಪೋಲೀಸ್ ಇಲಾಖೆ)**

ಕಾಮಗಾರಿ ಇಲಾಖೆ

1) ಪ್ರಸಾದ್ ಕೊಡಿಗೇಹಳ್ಳಿ ರವರು ಫುಟ್‌ಪಾತ್ ತೆರವು ಕಾರ್ಯಚರಣೆ ಮಾಡಲು ಕೋರಿದರು.
2) ವಿರೂಪಾಕ್ಷಪ್ಪ ರವರು ಕೋಕೋನೆಟ್ ಗಾರ್ಡನ್ ನಲ್ಲಿ 4 ಕ್ರಾಸ್‌ಗಳಲ್ಲಿ ಕಾಮಗಾರಿಗಳು ಕೆಲಸ ತುಂಬಾ ನಿಧಾನಗತಿಯಿಂದ ನಡೆಯುತ್ತಿರುತ್ತದೆ ಹಾಗೂ ಮಳೆ ಸಂದರ್ಭದಲ್ಲಿ ಲೇಔಟ್ ತುಂಬಾ ನೀರು ತುಂಬಿರುತ್ತದೆ ಎಂದು ತಿಳಿಸಿದರು.
3) ವಿರೂಪಾಕ್ಷಪ್ಪ ರವರು ಹೂಡಿ ಕೆರೆಯ ಕಟ್ಟೆಯು ಕಳೆದ ಬಾರಿ ಹೊಡೆದು ಹೋಗಿದ್ದು ಇದು ಕೋಕೋನೆಟ್ ಗಾರ್ಡನ್‌ಗೆ ನೀರು ಹರಿದು ಬಂದು ತೊಂದರೆಯಾಗುತ್ತದೆ ಎಂದು ತಿಳಿಸಿರುತ್ತಾರೆ.
4) ಕನಕರಾವ್ ರವರು ಹೂಡಿ ಕೆರೆಯ ಪಾರ್ಕ್‌ನಲ್ಲಿ ಟೈಲ್‌ಗಳನ್ನು ಅಳವಡಿಸಲು ಕೋರಿದರು.

**ಕ್ರಂ.ಸಂ 1ರಿಂದ 4 ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತು.**
**(ಕ್ರಮ:- ಸಕಾಅ/ಸಅ/ಬಿಬಿಎಂಪಿ/ಮೇಜರ್ ರೋಡ್**

Animal Husbandry:-

1) ವಾರ್ಡ್ ವ್ಯಾಪ್ತಿಯಲ್ಲಿ ನಾಯಿಗಳು ಹಾಗೂ ಹಂದಿಗಳ ಹಾವಳಿ ಹೆಚ್ಚಾಗಿರುತ್ತದೆ ಎಂದು ಸಾರ್ವಜನಿಕರು ತಿಳಿಸಿದರು.

**ಕ್ರಂ.ಸಂ 1 ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತು.**

(ಕ್ರಮ:-Animal Husbandry/ಬಿಬಿಎಂಪಿ)

Scanned with CamScanner

**ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

ಮುಂಜಾಗ್ರತಾ ಕ್ರಮವಾಗಿ ಸಭೆ ಸಮಾರಂಭ ಮಾಡದಂತೆ ತಿಳಿಸಲಾಯಿತ್ತು ಹಾಗೂ ವ್ಯಾಕ್ಸಿನ್‌ನೇಶನ್ ಹಾಕಿಸಲು ಸ್ಥಳಿಯರಿಗೆ ಮುಂಜಾಗ್ರತೆ ವಹಿಸಿ ಕ್ರಮಕೈಗೊಳ್ಳಲು ತಿಳಿಸಿದರು.

Covid-19, ವ್ಯಾಕ್ಸಿನೇಷನ್, Contact Tracing ಮತ್ತು Testing ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು. ಸಮಿತಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೂ ನೋಡಲ್ ಅಧಿಕಾರಿಗಳಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ನೋಡಲ್ ಅಧಿಕಾರಿ ಹಾಗೂ
ಸ.ಕಾ.ಅ. ಹೂಡಿ ಉಪವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮಹದೇವಪುರ ವಲಯ

ವಾರ್ಡ್ ಸಮಿತಿ ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ-54 ಹೂಡಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮಹದೇವಪುರ ವಲಯ

Scanned with CamScanner